ಇತರೆಲ್ಲಾ ಮುಂದುವರಿದ ರಾಷ್ಟ್ರಗಳು ಹೊಟ್ಟೆಕಿಚ್ಚಿನಿಂದ ನೋಡುವಂತೆ ಮಾಡಿದೆ.

**ಯಂತ್ರದ ವೈಶಿಷ್ಟ್ಯಗಳು**

ಶುದ್ಧೀಕರಣ ಘಟಕವನ್ನು ಜೀಪ್‌ಗೇ ಅಳವಡಿಸಿರುವುದರಿಂದ ಅತ್ಯಂತ ಸುಲಭವಾಗಿ ಎಂತಹ ದುರ್ಗಮ ಪ್ರದೇಶವನ್ನೂ ತಲುಪಬಹುದು. ಎಲ್ಲಾ ಪರಿಕರಗಳೊಂದಿಗೆ ಸುಸಜ್ಜಿತವಾಗಿ ಸ್ವತಂತ್ರ ಹಾಗೂ ಸ್ವಯಂಚಾಲಿತವಾಗಿ ಕಾರ್ಯ ನಿರ್ವಹಿಸುತ್ತದೆ. ವಾಹನವು ಒಟ್ಟಾರೆ ಕೇವಲ 1580 ಕೆ.ಜಿಯಷ್ಟೇ ಭಾರವನ್ನು ಹೊಂದಿದ್ದು, ಯಾವುದೇ ಕಳಪೆ ಗುಣಮಟ್ಟದ ನೀರನ್ನು (ಕೊಳಚೆ, ಕೆಸರು ಮಣ್ಣಿನಿಂದ ಕೂಡಿದ ಮತ್ತು ಸಮುದ್ರದ ನೀರನ್ನೂ) ಎಲ್ಲ ಸೀಸನ್‌ಗಳಲ್ಲೂ ಶುದ್ಧೀಕರಿಸುತ್ತದೆ. ಅತ್ಯಾಧುನಿಕ ತಂತ್ರಜ್ಞಾನವನ್ನು ಅಳವಡಿಸಿರುವ ಈ ಜೇಪ್‌ನ ನಿರ್ವಹಣೆಗೆ ಹೆಚ್ಚುವರಿ ಸಿಬ್ಬಂದಿ ಅಗತ್ಯವಿಲ್ಲ. ಜೀಪ್‌ಗೆ ಶುದ್ಧೀಕರಣ ಘಟಕವನ್ನು ಅಳವಡಿಸಿದ್ದರೂ ಗಂಟೆಗೆ ಸುಮಾರು 90 ಕಿ.ಮೀ ವೇಗದಲ್ಲಿ ಚಲಿಸುವ ಸಾಮರ್ಥ್ಯ ಹೊಂದಿದೆ.

ಇದರಲ್ಲಿ ನೀರನ್ನು ಶುದ್ಧೀಕರಿಸಲು ಹೆಚ್ಚುವರಿ ಇಂಧನದ ಅವಶ್ಯಕತೆಯಿಲ್ಲ. ಈ ವಾಹನವು ಚಲಿಸುವಾಗ ಅದರ ಡೈನಮೋ ಮೂಲಕ ಉತ್ಪತ್ತಿಯಾಗುವ ವಿದ್ಯುತ್‌ಅನ್ನು ಶೇಖರಿಸಿಟ್ಟು ಬಳಸುವ ಮತ್ತು ಸೌರ ಶಕ್ತಿಯಿಂದ ಚಲಿಸುವಂತೆ ನಿರ್ಮಿಸಲಾಗಿದೆ. ಹೀಗಾಗಿ ನೀರಿನ ಶುದ್ಧೀಕರಣದ ವೆಚ್ಚವೂ ಕಡಿಮೆಯೇ.

ಈ ಯಂತ್ರವು ಕೇವಲ ನೀರನ್ನು ಶುದ್ಧೀಕರಿಸುವುದಕ್ಕಷ್ಟೇ ಸೀಮಿತವಾಗಿರದೇ ಶುದ್ಧೀಕರಿಸಿದ ನೀರನ್ನು ಸ್ವಯಂ ಶೇಖರಿಸುವ ವ್ಯವಸ್ಥೆ ಹೊಂದಿದೆ. ಸುಮಾರು 250 ರಿಂದ 2650 ಗ್ಯಾಲನ್ ನೀರನ್ನು ಶೇಖರಿಸಿ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಕೊಂಡೊಯ್ಯುವಂತೆ ಇದನ್ನು ನಿರ್ಮಿಸಲಾಗಿದೆ. (1 ಗ್ಯಾಲನ್ ಎಂದರೆ 3.79 ಲೀಟರ್) ಈ ವಾಹನವು ಕೇವಲ 12ವ್ಯಾಟ್‌ನಷ್ಟು ಕಡಿಮೆ ಸಾಮರ್ಥ್ಯದ ವಿದ್ಯುತ್‌ನಲ್ಲೂ ಚಲಿಸುವಂತೆ ನಿರ್ಮಿಸಿರುವುದು



ಯಂತ್ರದ ವಿಶೇಷತೆಗಳಲ್ಲೊಂದು.

ಇದೊಂದು ಅತ್ಯಂತ ಸಣ್ಣ, ಸರಳ, ಸುಲಭವಾದ ನೀರು ಶುದ್ಧೀಕರಣದ ಆಯಾಮವಾಗಿದ್ದು, ಸುಲಭವಾಗಿ ಹಾಗೂ ವೇಗವಾಗಿ ನೀರನ್ನು ಶುದ್ಧೀಕರಿಸಿ ಸಾಗಿಸಬಲ್ಲದು. ಈ ವಾಹನದ ಬೆಲೆ ಸರಿ ಸುಮಾರು 70.85 ಲಕ್ಷ ರೂಪಾಯಿ ಅಷ್ಟೆ. ನಮ್ಮಲ್ಲಿ ನೀರಿನ ಸಮಸ್ಯೆಯಿರುವ, ಸಮುದ್ರ ತೀರದ ಎಲ್ಲಾ ರಾಜ್ಯಗಳೂ ಈ ಘಟಕವನ್ನು ಖರೀದಿಸಬಹುದು.

ಪ್ರಧಾನಿ ಭೇಟಿ: ಕಳೆದ ವರ್ಷ ಜುಲೈ 6ರಂದು ಭಾರತದ ಪ್ರಧಾನಿ ನರೇಂದ್ರ ಮೋದಿಯವರು ಇಸ್ರೇಲ್‌ಗೆ ಭೇಟಿ ನೀಡಿದಾಗ ಈ ಸಂಚಾರಿ ಘಟಕದ ಪ್ರಾತ್ಯಕ್ಷಿಕೆಯನ್ನು ವೀಕ್ಷಿಸಿದರು. ಇಸ್ರೇಲ್‌ನ ಪ್ರಧಾನಿ ಬೆಂಜಮಿನ್ ನೆತನ್ಯಾಹು ಓಲ್ಗಾ ಕಿನಾರೆಯಲ್ಲಿ ನಮ್ಮ ಪ್ರಧಾನಿಯವರನ್ನು ಕರೆದುಕೊಂಡು ಇದೇ ಜೇಪ್‌ನಲ್ಲಿ ಸಂಚರಿಸಿದರು. ನೆತನ್ಯಾಹು ಅವರು ಈ ಜೇಪ್ ಅನ್ನು 'ಭವಿಷ್ಯದ ಜೇಪ್' ಎಂದು ಬಣ್ಣಿಸಿದರು. ಇದನ್ನು ಬಗ್ಗೀ ಜೇಪ್ ಎಂದೂ ಕರೆಯುತ್ತಾರೆ. ಅಂತರ್ಜಲವೇ ಇಲ್ಲದ, ಲಭ್ಯವಿರುವ ಅಷ್ಟೂ ನೀರು ಕುಡಿಯಲು ಯೋಗ್ಯವಲ್ಲದ ದೇಶವೊಂದು ಈ ನಿಟ್ಟಿನಲ್ಲಿ ನಡೆಸಿರುವ ತಂತ್ರಜ್ಞಾನ ಕ್ರಾಂತಿ ನಿಜಕ್ಕೂ ಮೆಚ್ಚುವಂತಹದ್ದು. ಭಾರತಕ್ಕೂ ಶೀಘ್ರ ಈ ಜೇಪ್ ಬರಲಿದೆ.



